14/04/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ಯೋಗಬಲದಿಂದ ನಷ್ಟದ ಖಾತೆಯನ್ನು ಸಮಾಪ್ತಿ ಮಾಡಿ, ಸುಖದ ಖಾತೆಯನ್ನು ಜಮಾ ಮಾಡಿಕೊಳ್ಳಿ, ವ್ಯಾಪಾರಿಯಾಗಿ ತಮ್ಮ ಪೂರ್ಣ ಲೆಕ್ಕವನ್ನು ತೆಗೆಯಿರಿ"

ಪ್ರಶ್ನೆ: ನೀವು ಮಕ್ಕಳು ತಂದೆಯೊಂದಿಗೆ ಯಾವ ಪ್ರತಿಜ್ಞೆಯನ್ನು ಮಾಡಿದ್ದೀರಿ, ಆ ಪ್ರತಿಜ್ಞೆಯನ್ನು ನಿಭಾಯಿಸುವಂತಹ ಸಹಜ ಸಾಧನ ಏನಾಗಿದೆ?

ಉತ್ತರ: ನೀವು ಪ್ರತಿಜ್ಞೆ ಮಾಡಿದ್ದೀರಿ - ನನ್ನವರಂತು ಒಬ ಶಿವಬಾಬಾವರ ವಿನಃ ಅನ್ಯರು ಯಾರೂ ಇಲ್ಲ.... ಭಕ್ತಿಯಲ್ಲೂ ನೀವು ಹೇಳುತ್ತಿದ್ದಿರಿ - ಬಾಬಾ, ನೀವು ಬರುತ್ತೀರೆಂದರೆ ನಾವು ಮತ್ತೆಲ್ಲಾ ಸಂಗಗಳನ್ನು ಬಿಟ್ಟು ನಿಮ್ಮ ಸಂಗವನ್ನು ಜೋಡಿಸುತ್ತೇವೆ. ಈಗ ಬಾಬಾ ಹೇಳುತ್ತಾರೆ - ಮಕ್ಕಳೇ, ದೇಹ ಸಹಿತ ದೇಹದ ಎಲ್ಲಾ ಸಂಬಂಧಗಳನ್ನು ಬುದ್ಧಿಯಿಂದ ತ್ಯಾಗ ಮಾಡಿ ನನ್ನೊಬ್ಬನನ್ನೇ ನೆನಪು ಮಾಡಿ. ಈ ಹಳೆಯ ಶರೀರದಿಂದಲೂ ಸಹ ಮಮತ್ವವನ್ನು ತೆಗೆಯಿರಿ ಆದರೆ ಇದರಲ್ಲೇ ಪರಿಶ್ರಮವಿದೆ. ಈ ಪ್ರತಿಜ್ಞೆಯನ್ನು ನಿಭಾಯಿಸುವುದಕ್ಕೋಸ್ಕರ ಬೆಳಗ್ಗೆ-ಬೆಳಗ್ಗೆ ಎದ್ದು ತಮ್ಮೊಂದಿಗೆ ತಾವೇ ಮಾತನಾಡಿಕೊಳ್ಳಿ ಹಾಗೂ ವಿಚಾರ ಮಾಡಿ - ಈಗ ಈ ನಾಟಕವು ಪೂರ್ಣವಾಗುತ್ತದೆ.

ಗೀತೆ: ಆಕಾಶ ಸಿಂಹಾಸನವನ್ನು ಬಿಟ್ಟು ಬಾ............

ಓಂ ಶಾಂತಿ. ಮಕ್ಕಳು ತಂದೆಯನ್ನು ಕರೆಯುತ್ತಾರೆ - ಪರಮಧಾಮದಿಂದ ಬನ್ನಿ ಎಂದು. ಪತಿತ ಮನುಷ್ಯರದ್ದೇ ಗೀತೆಯನ್ನು ಹಾಡಲಾಗಿದೆ ಆದರೆ ಅವರೇ ಇದರ ಅರ್ಥವನ್ನು ತಿಳಿದುಕೊಂಡಿಲ್ಲ. ಪತಿತರನ್ನು ಪಾವನ ಮಾಡಲು ಬನ್ನಿ ಎಂದು ಕರೆಯುತ್ತಾರೆ ಏಕೆಂದರೆ ಈ ಸಮಯದಲ್ಲಿ ರಾವಣ ರಾಜ್ಯವಿದೆ. ಭಾರತದಲ್ಲಿ ದೈವೀ ಶ್ರೇಷ್ಠಾಚಾರಿ ರಾಜ್ಯವಿತ್ತು ಎನ್ನುವುದನ್ನೂ ಸಹ ನಾವು ಮಕ್ಕಳೇ ತಿಳಿದುಕೊಂಡಿದ್ದೇವೆ. ಈಗ ಶ್ರೇಷ್ಠಾಚಾರಿಗಳಾಗುವುದಕ್ಕೋಸ್ಕರ ನಾವು ಪುರುಷಾರ್ಥವನ್ನು ಮಾಡುತ್ತಿದ್ದೇವೆ. ತಂದೆಯು ಹೇಳುತ್ತಾರೆ ಮಕ್ಕಳೇ ನೀವೀಗ ಹಿಂತಿರುಗಿ ಮನೆಗೆ ಹೋಗಬೇಕಾಗಿದೆ. ಆದ್ದರಿಂದ ಹಳೆಯ ಪಾಪದ ಖಾತೆಯನ್ನು ಸಮಾಪ್ತಿ ಮಾಡಿಕೊಳ್ಳಬೇಕು. ಆ ವ್ಯಾಪಾರಿಗಳೆಲ್ಲರೂ 12 ತಿಂಗಳಿಗೊಮ್ಮೆ ಹಳೆಯ ಖಾತೆಗಳನ್ನು ಸಮಾಪ್ತಿ ಮಾಡುತ್ತಾರೆ. ನಷ್ಟ ಹಾಗೂ ಲಾಭದ ಲೆಕ್ಕವನ್ನು ತೆಗೆಯುತ್ತಾರೆ. ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ - ಭಾರತದಲ್ಲಿ ನಾವು ಅರ್ಧಕಲ್ಪ ಗಳಿಕೆಯಲ್ಲಿ, ಅರ್ಧಕಲ್ಪ ನಷ್ಟದಲ್ಲಿ ಇರುತ್ತೇವೆ ಅರ್ಥಾತ್ ಅರ್ಧಕಲ್ಪ ಸುಖ, ಅರ್ಧಕಲ್ಪ ದುಃಖವನ್ನು ಪಡೆಯುತ್ತೇವೆ. ಅದರಲ್ಲಿಯೂ ಸಹ ತುಂಬಾ ಕಡಿಮೆ ದುಃಖವನ್ನು ಪಡೆಯುತ್ತೇವೆ, ಯಾವಾಗ ತಮೋಪ್ರಧಾನ ಸ್ಥಿತಿಯಾಗುತ್ತದೆ, ಆಗ ವ್ಯಭಿಚಾರಿ ಭಕ್ತಿಯಲ್ಲಿ ಹೊರಟು ಹೋಗುತ್ತೇವೆ. ತಂದೆಯೇ ಕುಳಿತು ಮಕ್ಕಳಿಗೆ ತಿಳಿಸುತ್ತಾರೆ - ನೀವೀಗ ಸಂಪಾದನೆಯಲ್ಲಿ ಹೋಗಬೇಕಾಗಿದೆ. ನಷ್ಟದ ಖಾತೆಯನ್ನು ಈಗ ಯೋಗಬಲದಿಂದ ಸಮಾಪ್ತಿ ಮಾಡಬೇಕಾಗಿದೆ. ನಿಮ್ಮ ಪಾಪಗಳ ಖಾತೆಯನ್ನು ಈಗ ಕತ್ತರಿಸಬೇಕು. ನಂತರ ಸುಖದ ಖಾತೆಯನ್ನು ಜಮಾ ಮಾಡಿಕೊಳ್ಳಬೇಕು. ನೀವು ಎಷ್ಟು ನನ್ನನ್ನು ನೆನಪು ಮಾಡುತ್ತೀರಿ ಅಷ್ಟು ನಿಮ್ಮ ಪಾಪದ ಖಾತೆಯು ಭಸ್ಮ ಆಗುವುದು ಮತ್ತು ಪವಿತ್ರರಾಗಿ ಗೀತೆಯ ಜ್ಞಾನದ ಧಾರಣೆ ಮಾಡಬೇಕಾಗಿದೆ. ಇಲ್ಲಿ ಯಾವುದೇ ಗೀತಾಶಾಸ್ತ್ರವನ್ನು ತಿಳಿಸುವುದಿಲ್ಲ. ಈ ಗೀತಾ ಜ್ಞಾನವನ್ನು ಸ್ವಯಂ ಭಗವಂತನೇ ಕೊಟ್ಟಿದ್ದಾರೆ. ಈ ಸಮಯದಲ್ಲಿ ಮನುಷ್ಯರ ಬುದ್ಧಿಯು ತಮೋಪ್ರಧಾನವಾಗಿರುವ ಕಾರಣ ತಂದೆಯನ್ನು ತಿಳಿದುಕೊಂಡಿಲ್ಲ ಆದ್ದರಿಂದಲೇ ಇವರನ್ನು ಅನಾಥರೆಂದು ಹೇಳಲಾಗುತ್ತದೆ. ನೀವು ತಿಳಿಸುತ್ತೀರಿ - ಭಾರತವು ಪುಣ್ಯಾತ್ಮ, ಶ್ರೇಷ್ಠಾಚಾರಿಗಳ ಪ್ರಪಂಚವಾಗಿತ್ತು, ಇವರ ಚಿತ್ರಗಳೂ ಇದೆ. ಭಾರತವು ಸತ್ಯಯುಗದ ಆದಿಯಲ್ಲಿ ತುಂಬಾ ಸಾಹುಕಾರನಾಗಿತ್ತು ಮತ್ತೆ ಯಾವುದೆಲ್ಲಾ ಇಸ್ಲಾಮಿ, ಬೌದ್ಧಿ ಮುಂತಾದವು ಧರ್ಮಗಳಿವೆ. ಅವರೂ ಸಹ ಆರಂಭದಲ್ಲಿ ಕೆಲವರೇ ಇರುತ್ತಾರೆ. ಧರ್ಮ ಸ್ಥಾಪಕರು ಬಂದಾಗ ಆ ಧರ್ಮದ ಆತ್ಮಗಳು ಬರುತ್ತಾ ಇರುತ್ತಾರೆ ಆದರೆ ಅವರು ಯಾವುದೇ ರಾಜ್ಯಾಧಿಕಾರದಲ್ಲಿ ಬರುವುದಿಲ್ಲ. ಅವರು ತಮ್ಮ-ತಮ್ಮ ಧರ್ಮದಲ್ಲಿಯೇ ಬರುತ್ತಾರೆ. ಯಾವಾಗ ಲಕ್ಷ್ಯಂತರ, ಕೋಟ್ಯಾಂತರ ಅಂದಾಜಿನಲ್ಲಿ ಬರುತ್ತಾ ಹೋಗುತ್ತಾರೆ, ಆಗ ರಾಜಾ-ರಾಣಿ ಆಗುತ್ತಾರೆ. ಇಲ್ಲಿ ನಿಮ್ಮದಂತು ಶುರುವಿನಿಂದ ಹಿಡಿದು ರಾಜ್ಯಾಧಿಕಾರವು ನಡೆಯುತ್ತದೆ. ಸತ್ಯಯುಗದ ಆದಿಯಲ್ಲಿಯೇ ಲಕ್ಷ್ಮೀ-ನಾರಾಯಣರ ರಾಜ್ಯವಿತ್ತು-ಭಾರತವು ಮಹಾನ್ ಉತ್ತಮವಾಗಿತ್ತು. ಆಗ ಶ್ರೇಷ್ಠಾಚಾರಿಯಾಗಿತ್ತು. ಶ್ರೇಷ್ಠಾತಿ ಶ್ರೇಷ್ಠ ಭಗವಂತ ಎಂದು ಗಾಯನವಿದೆ. ಅವರನ್ನೇ ಸತ್ಯ ಎಂದು ಹೇಳುತ್ತಾರೆ ಏಕೆಂದರೆ ಅವರು ಬಂದು ಸತ್ಯ ಜ್ಞಾನವನ್ನು ಕೊಡುತ್ತಾರೆ ಮತ್ತೆಲ್ಲರೂ ತಂದೆಯ ಬಗ್ಗೆ ಅಸತ್ಯ ಜ್ಞಾನವನ್ನು ಕೊಡುತ್ತಾರೆ. ಎಲ್ಲರೂ ಓ ಭಗವಂತ! ಎಂದು ನೆನಪು ಮಾಡುತ್ತಾರೆ ಆದರೆ ಅಂತಹ ಭಗವಂತನನ್ನು ಯಾರೂ ಅರಿತುಕೊಂಡಿಲ್ಲ. ಎಂದಾದರೂ ನೀವು ಯಾರನ್ನಾದರೂ ಕೇಳಿದರೆ - ನೀವು ಲೌಕಿಕ ತಂದೆಯನ್ನು ಅರಿತುಕೊಂಡಿದ್ದೀರಾ ಎಂದಾಗ ಅವರು ಸರ್ವವ್ಯಾಪಿಯಾಗಿದ್ದಾರೆ ಎಂದು ಹೇಳಲು ಹೇಗೆ ಸಾಧ್ಯವೇ? ತಂದೆಯೆಂದರೆ ತಂದೆಯಾಗಿದ್ದಾರೆ. ತಂದೆಯ ಆಸ್ತಿಯು ಸಿಗುತ್ತದೆ. ಅಂತಹ ತಂದೆಯೇ ಹೇಳುತ್ತಾರೆ - ನಾನು ನಿಮ್ಮ ಬೇಹದ್ದಿನ ರಚಯಿತನಾಗಿದ್ದೇನೆ ಮತ್ತು ನನ್ನನ್ನು ಕರೆಯುವುದೇ ಈ ಪತಿತ ಪ್ರಪಂಚದಲ್ಲಿ, ಪ್ರಳಯವಂತು ಆಗುವುದಿಲ್ಲ. ಈಗ ಇಡೀ ಪ್ರಪಂಚವೇ ಪತಿತ ಪ್ರಪಂಚವಾಗಿದೆ ಆದ್ದರಿಂದ ನೀವು ಮಕ್ಕಳಿಗೋಸ್ಕರವೇ ಬರಬೇಕಾಗುತ್ತದೆ. ಬಂದು ನೀವು ಮಕ್ಕಳಿಗೆ ತಿಳಿಸುತ್ತೇನೆ. ಮನುಷ್ಯರು ಗುರುಗಳು

ಮುಂತಾದವರನ್ನು ಶಾಂತಿಗೋಸ್ಕರವೇ ಮಾಡಿಕೊಳ್ಳುತ್ತಾರೆ. ಆದರೆ ಅವರೆಲ್ಲರೂ ಭಕ್ತಿ ಮಾರ್ಗಕ್ಕೋಸ್ಕರವೇ ಹಠಯೋಗ ಮುಂತಾದವನ್ನು ಕಲಿಸುತ್ತಾರೆ. ಅವರಿಂದ ಯಾವುದೇ ಬೇಹದ್ದಿನ ಆಸ್ತಿಯು ಸಿಗಲು ಸಾಧ್ಯವಿಲ್ಲ. ಗುರುಗಳನ್ನು ಮಾಡಿಕೊಂಡರೂ ಅವರಿಂದ ಅಲ್ಪಕಾಲಕ್ಕೋಸ್ಕರ ಸ್ವಲ್ಪ ಸುಖವೇ ಸಿಗುತ್ತದೆ. ಏಕೆಂದರೆ ಅವರೆಲ್ಲರೂ ಹದ್ದಿನ ಸುಖ ಕೊಡುವವರಾಗಿದ್ದಾರೆ. ಆದರೆ ಬೇಹದ್ದಿನ ತಂದೆಯು ಬೇಹದ್ದಿನ ಸುಖವನ್ನೇ ಕೊಡುತ್ತಾರೆ. ತಂದೆಯು ನಮಗೋಸ್ಕರ ಮುಕ್ತಿ-ಜೀವನ್ಮುಕ್ತಿಯ ಕೊಡುಗೆಯನ್ನು ತೆಗೆದುಕೊಂಡು ಬರುತ್ತಾರೆ. ಸತ್ಯಯುಗದಲ್ಲಿ ಕೇವಲ ಒಂದೇ ಧರ್ಮವಿರುತ್ತದೆ. ಇಲ್ಲಂತೂ ಅನೇಕ ಧರ್ಮಗಳಿವೆ, ವೃದ್ಧಿಯಾಗುತ್ತಲೇ ಇರುತ್ತದೆ ನಂತರ ಇಷ್ಟೆಲ್ಲಾ ಆತ್ಮಗಳು ಹಿಂತಿರುಗಿ ಶಾಂತಿಧಾಮದಲ್ಲಿ ಹೋಗುತ್ತಾರೆ. ಈ ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಜ್ಞಾನವು ನೀವು ಮಕ್ಕಳಿಗೆ ಮಾತ್ರವೇ ಸಿಗುತ್ತಿದೆ. ತಂದೆಯು ಈ ಮನುಷ್ಯ ಸೃಷ್ಟಿಯ ಬೀಜರೂಪನಾಗಿದ್ದಾರೆ, ಅವರ ಹತ್ತಿರ ಎಲ್ಲಾ ಜ್ಞಾನವು ಇದೆ. ಸರ್ವವ್ಯಾಪಿಯೆಂದು ಹೇಳುವುದರಿಂದ ಜ್ಞಾನ ಹಾಗೂ ಭಕ್ತಿಯ ಯಾವುದೇ ಮಾತು ಅಲ್ಲಿ ನಿಲ್ಲುವುದೇ ಇಲ್ಲ. ಒಂದುವೇಳೆ ಭಗವಂತನು ಸರ್ವವ್ಯಾಪಿ ಆಗಿದ್ದರೆ ಅಂತಹ ಭಗವಂತನ ಭಕ್ತಿ ಮಾಡುವ ಆವಶ್ಯಕತೆಯಾದರೂ ಏನು! ಭಕ್ತಿ ಮಾಡುತ್ತಾರೆ ಆದರೆ ಏನೂ ತಿಳಿದುಕೊಂಡಿಲ್ಲ. ಕಲ್ಲು-ಮುಳ್ಳು ಎಲ್ಲದರ ಭಕ್ತಿ ಮಾಡುತ್ತಿರುತ್ತಾರೆ, ಗಂಗೆಯಲ್ಲಿ ಸ್ನಾನ ಮಾಡಲು ಎಷ್ಟೊಂದು ಜನ ಹೋಗುತ್ತಾರೆ. ಒಂದುವೇಳೆ ಗಂಗೆಯು ಪತಿತ-ಪಾವನಿ ಆಗಿದ್ದೇ ಆದರೆ ನಂತರ ಎಲ್ಲರೂ ಪಾವನರಾಗಬೇಕಿತ್ತು! ಮುಕ್ತಿ-ಜೀವನ್ಮುಕ್ತಿ ಧಾಮದಲ್ಲಿ ಹೋಗಬೇಕಿತ್ತು! ಆದರೆ ಯಾರೂ ಹೋಗುವುದಿಲ್ಲ. ಒಬ್ಬ ಗುರು ಹಿಂತಿರುಗಿ ಹೋದರೆ ಅವರ ಅನುಯಾಯಿಗಳೆಲ್ಲರೂ ಹೋಗಬೇಕು. ಆದರೆ ಯಾವಾಗ ತಾವೇ ಹೋಗುವುದೇ ಗೊತ್ತಿಲ್ಲವೆಂದರೆ, ಅವರ ಅನುಯಾಯಿಗಳಿಗೇನು ಹೇಳಲು ಸಾಧ್ಯ? ತುಂಬಾ ದೇಹಾಭಿಮಾನದಲ್ಲಿದ್ದಾರೆ. ಆ ಕಾರಣದಿಂದ ನಾನು ನಿರಾಕಾರ ಪರಮಪಿತ ಪರಮಾತ್ಮ ನೀವು ಮಕ್ಕಳ ತಂದೆಯಾಗಿದ್ದೇನೆ ಎಂದು ಯಾರೂ ಹೇಳಲು ಸಾಧ್ಯವಿಲ್ಲ ಮತ್ತು ನಿಮ್ಮನ್ನು ಜೊತೆ ಕರೆದುಕೊಂಡು ಹೋಗಲು ಬಂದಿದ್ದೇನೆಂದು ಹೇಳಲೂ ಸಾಧ್ಯವಿಲ್ಲ. ಈ ಅಧಿಕಾರ ತಂದೆಯೊಬ್ಬರಿಗೆ ಇದೆ. ಈಗ ಈ ಹಳೆಯ ಪ್ರಪಂಚವನ್ನು ಬಿಡಬೇಕಾಗಿದೆ ಆದ್ದರಿಂದ ಅವಶ್ಯವಾಗಿ ಯೋಗಬಲ ಬೇಕಾಗಿದೆ. ತಪ್ಪು ಮಾಡುವುದರಿಂದ ಪದವಿಯನ್ನು ಪಡೆಯುವುದಿಲ್ಲ. ಬಾಬಾ ನಮ್ಮನ್ನು ಯೋಗ್ಯರನ್ನಾಗಿ ಮಾಡುತ್ತಿದ್ದಾರೆಂಬುದನ್ನು ನಾವು ಮಕ್ಕಳೀಗ ತಿಳಿದುಕೊಂಡಿದ್ದೇವೆ. ಯಾವ ಮಕ್ಕಳು ಯೋಗ್ಯರಾಗುವುದಿಲ್ಲ ಅವರು ದಿವಾಳಿಯಾಗುತ್ತಾರೆ. ಕಲ್ಪ-ಕಲ್ಪವು ನಿಮ್ಮನ್ನು 100% ನಿರ್ವಿಕಾರಿಯನ್ನಾಗಿ ಮಾಡುತ್ತೇನೆ, ಆದರೆ ರಾವಣ ಪುನಃ ನಿಮ್ಮನ್ನು ವಿಕಾರಿಗಳನ್ನಾಗಿ ಮಾಡುತ್ತಾನೆ. ಇದನ್ನಂತು ತಿಳಿಯುತ್ತಾರೆ - ಈ ಮಾತು ಸರಿಯಾಗಿದೆ, ಈಗ ಅವಶ್ಯವಾಗಿ ಕಲಿಯುಗದ ಅಂತ್ಯವಾಗಿದೆ, ಸತ್ಯಯುಗದ ಆದಿಯ ಸಂಗಮವಾಗಿದೆ. ತಿಳಿದುಕೊಳ್ಳಿ. ಮನೆಯ ಆಯಸ್ಸು 100 ವರ್ಷವಿದೆ. ಒಂದುವೇಳೆ ಅದಕ್ಕೆ 25 ವರ್ಷ ಕಳೆಯಿತೆಂದರೆ ಅದು 1/4 (ಕಾಲು ಭಾಗ) ಹಳೆಯದಾಯಿತು ಎಂದರ್ಥ. 50 ವರ್ಷವು ಕಳೆದಾಗ ಅದಕ್ಕೆ ಹಳೆಯ ಹೆಸರನ್ನು ಇಡುತ್ತಾರೆ. ಹ್ದಾಗೆಯೇ ಇದನ್ನು ನಾಲ್ಕು ಭಾಗಗಳನ್ನಾಗಿ ಮಾಡಲಾಗಿದೆ, ಸತೋ, ರಜೋ, ತಮೋ ಈಗ ಇದು ಹಳೆಯ ಪ್ರಪಂಚದಿಂದ ಹೊಸ ಪ್ರಪಂಚವಾಗುವುದು ಅಂದರೆ ಇಡೀ ಪ್ರಪಂಚಕ್ಕೆ ಹೊಸ ಜನ್ಮ ಸಿಗುವುದಿದೆ. ಈಗ ಇದು ಹಳೆಯ ಪ್ರಪಂಚವಾಗಿದೆ. ತಂದೆಯು ಹೇಳುತ್ತಾರೆ ಮಕ್ಕಳೇ ನಾನೀಗ ಹೊಸ ಜನ್ಮವನ್ನು ಕೊಡುತ್ತಿದ್ದೇನೆ, ಹಳೆಯ ಪ್ರಪಂಚದಿಂದ ಹೊಸದಾಗುತ್ತಾ ಇದೆ. ನೀವಿಲ್ಲಿ ರಾಜಯೋಗವನ್ನು ಕಲಿಯಲು ಬಂದಿದ್ದೀರಿ. ನಾವು ಈ ನಾಟಕದಲ್ಲಿ ಪಾತ್ರಧಾರಿಗಳಾಗಿದ್ದೇವೆಂಬುದನ್ನು ನೀವು ತಿಳಿದುಕೊಂಡಿದ್ದೀರಿ. ನಾವು ಆತ್ಮರು ಶರೀರವನ್ನು ತೆಗೆದುಕೊಂಡು ಇಲ್ಲಿ ಪಾತ್ರ ಅಭಿನಯಿಸಲು ಬಂದಿದ್ದೇವೆ. ಆದರೆ ಪ್ರಪಂಚದಲ್ಲಿ ಯಾರೂ ಇದನ್ನು ತೆಗೆದುಕೊಂಡಿಲ್ಲ. ತಮ್ಮನ್ನು ಪಾತ್ರಧಾರಿ ಎಂದು ತಿಳಿದುಕೊಂಡಾಗ ನಮ್ಮ ರಚಯಿತ, ನಿರ್ದೇಶಕರನ್ನು ತಿಳಿದುಕೊಳ್ಳಲು ಸಾಧ್ಯ. ಕೇವಲ ಹೇಳುತ್ತಾರೆ ಇದು ಕರ್ಮಕ್ಷೇತ್ರವಾಗಿದೆ ಎಂದು. ಆದರೆ ಈ ಆಟವು ಯಾವಾಗಿನಿಂದ ಶುರುವಾಯಿತು, ಅದರ ನಿರ್ದೇಶಕರು ಯಾರಾಗಿದ್ದಾರೆಂದು ತಿಳಿದುಕೊಂಡಿಲ್ಲ. ಮನುಷ್ಯರನ್ನು ತಿಳಿದುಕೊಳ್ಳಬೇಕಲ್ಲವೇ! ಬಾಕಿ ಪರಸ್ಪರದಲ್ಲಿ ಜಗಳಾಡುವುದೆಂದರೆ ಇದು ಅನಾಥರ ಕೆಲಸವಾಗಿದೆ. ದೇವತೆಗಳನ್ನು ಅನಾಥರೆಂದು ಹೇಳುವುದಿಲ್ಲ. ಏಕೆಂದರೆ ಅಲ್ಲಿ ಜಗಳ-ಕಲಹವು ಇರುವುದೇ ಇಲ್ಲ. ಇಲ್ಲಿ ನೋಡಿ ಮಕ್ಕಳು ತಂದೆಯನ್ನೇ ಹೊಡೆಯುತ್ತಾರೆ. ಎಲ್ಲರೂ ಪತಿತ ಭ್ರಷ್ಟಾಚಾರಿ ಆಗಿದ್ದಾರೆ, ಆದ್ದರಿಂದ ದುಃಖವನ್ನೇ ಕೊಡುತ್ತಿರುತ್ತಾರೆ. ಅರ್ಧಕಲ್ಪ ಸಂಪೂರ್ಣ ನಿರ್ವಿಕಾರಿ ದೇವೀ-ದೇವತೆಗಳ ರಾಜ್ಯವಿತ್ತು. ಈಗಂತೂ ಒಬ್ಬರೂ ಸಂಪೂರ್ಣ ನಿರ್ವಿಕಾರಿಗಳಾಗಿಲ್ಲ. ಈಗ ತಂದೆಯು ನಿಮಗೆ ಶ್ರೀಮತವನ್ನು ಕೊಡುತ್ತಾರೆ. ಈಗ ಈ ಹಳೆಯ ಪ್ರಪಂಚವು ಸಮಾಪ್ತಿಯಾಗುವುದಿದೆ. ನಾನು ಹೊಸ ಪ್ರಪಂಚವನ್ನು ಸ್ಥಾಪನೆ ಮಾಡಲು ಬಂದಿದ್ದೇನೆ. ನೀವು ಪ್ರತಿಜ್ಞೆಯನ್ನು ಮಾಡುತ್ತೀರಿ ಬಾಬಾ ನೀವು ಬರುತ್ತೀರೆಂದರೆ ನಾವು ಮತ್ತೆಲ್ಲಾ ಸಂಗಗಳನ್ನು ಬಿಟ್ಟು ನಿಮ್ಮೊಬ್ಬರ ಸಂಗವನ್ನೇ ಜೋಡಿಸುತ್ತೇವೆ. ನನ್ನವರಂತೂ ಒಬ್ಬ ತಂದೆಯ ವಿನಃ ಅನ್ಯರಾರೂ ಇಲ್ಲ. ಈಗ ತಂದೆಯು ಬಂದಿದ್ದಾರೆ ಹಾಗೂ ಹೇಳುತ್ತಾರೆ, ಮಕ್ಕಳು ದೇಹ ಸಹಿತ ದೇಹದ ಎಲ್ಲಾ ಸಂಬಂಧಗಳು ತ್ಯಾಗ ಮಾಡಿ ನನ್ನೊಬ್ಬನನ್ನೇ ನೆನಪು ಮಾಡಿ. ಇದರಲ್ಲೇ ಪರಿಶ್ರಮವಿದೆ. ಮಕ್ಕಳು ಹೇಳುತ್ತಾರೆ - ಬಾಬಾ ನಾವು ತಿಳಿದುಕೊಂಡಿದ್ದೇವೆ ಯಾರೆಲ್ಲಾ ಮಿತ್ರ ಸಂಬಂಧಿ ಮುಂತಾದವರಿದ್ದಾರೆ ಇವರೆಲ್ಲರೂ ಸತ್ತು ಹೋಗಿದ್ದಾರೆ. ಈ ಶರೀರವು ಹಳೆಯದಾಗಿದೆ ಆದ್ದರಿಂದ ಶರೀರವು ಸಮಾಪ್ತಿಯಾಗುವುದು. ಈಗ ನಾವು ಹಳೆಯ ಶರೀರವನ್ನು ಬಿಟ್ಟು ಹೊಸದರಲ್ಲಿ ಪ್ರವೇಶ ಮಾಡುತ್ತೇವೆ. ಈ ಹಳೆಯ ಶರೀರದೊಂದಿಗಿನ ಮಮತ ದೂರವಾಗುತ್ತದೆ. ಈಗ ನಾವು ಹೋದವೆಂದರೆ ಹೋದೆವು. ಹಳೆಯ ಪ್ರಪಂಚವು ಭಸ್ಮವಾಗುವುದಿದೆ. ತಂದೆಯು ತಿಳಿಸುತ್ತಾರೆ - ಮಕ್ಕಳೇ, ಬೆಳಗ್ಗೆ ಬೆಳಗ್ಗೆ ಎದ್ದು ಇಂತಹ ವಿಚಾರ ಮಾಡಿ, ಈಗ ಈ ನಾಟಕವು ಪೂರ್ಣ ಆಗುತ್ತದೆ, ನಾವು ಹಿಂತಿರುಗಿ ಹೋಗಬೇಕಾಗಿದೆ. ಈಗ ಒಬ್ಬ ತಂದೆಯ ಶ್ರೀಮತದನುಸಾರ ನಡೆಯಬೇಕಾಗಿದೆ. ಈಗ ಹೊಸ ಪ್ರಪಂಚದಲ್ಲಿ ಹೋಗಬೇಕಾಗಿದೆ ಆದ್ದರಿಂದ ಜೀವಿಸಿದ್ದಂತೆ ಎಲ್ಲದರಿಂದ ಬುದ್ಧಿಯೋಗವನ್ನು ತೆಗೆದು ಒಬ್ಬರೊಂದಿಗೆ

ಜೋಡಿಸಬೇಕಾಗುವುದು, ಇದರಲ್ಲಿ ತುಂಬಾ ಅಭ್ಯಾಸ ಬೇಕು. ಈ ಅಭ್ಯಾಸಕ್ಕೋಸ್ಕರವು ತಂದೆಯು ಹೇಳುತ್ತಾರೆ - ಮಕ್ಕಳೇ. ಬೆಳಗ್ಗೆ-ಬೆಳಗ್ಗೆ ಎದ್ದೇಳಿ. ದಿನದಲ್ಲಂತು ಶರೀರ ನಿರ್ವಾಹಣಾರ್ಥ ಕರ್ಮ ಮಾಡಬೇಕಾಗಿದೆ. ರಾತ್ರಿಯ ಅಭ್ಯಾಸವು ವೃದ್ಧಿಯನ್ನು ಪಡೆಯುತ್ತದೆ. ಆದ್ದರಿಂದ ಎಷ್ಟು ಸಮಯ ಸಿಕ್ಕಿದರೆ ಅಷ್ಟು ತಂದೆಯನ್ನು ನೆನಪು ಮಾಡಿ. ತಂದೆಯ ನೆನಪಿನಲ್ಲಿ ನೀವು ಎಷ್ಟೆ ಕಾಲ್ನಡಿಗೆಯಲ್ಲಿ ಹೋಗಿ ಎಂದೂ ಸುಸ್ತಾಗುವುದಿಲ್ಲ ಏಕೆಂದರೆ ಯೋಗಬಲದ ಖುಷಿ ಇರುತ್ತದೆ. ನೆನಪಿನ ಅಭ್ಯಾಸ ಆಗುವುದರಿಂದ ಎಲ್ಲಿಯ ಕುಳಿತರೂ ತಂದೆಯ ನೆನಪು ಬಂದು ಬಿಡುವುದು. ಊಟಾ ಮಾಡುವ ಸಮಯದಲ್ಲಿಯೂ ತಂದೆಯ ನೆನಪಿನಲ್ಲಿ ಇರಬೇಕಾಗಿದೆ. ವ್ಯರ್ಥವಾದ ವಾರ್ತಾಲಾಪ ನಡೆಯಬಾರದು ಏಕೆಂದರೆ ತಂದೆಯ ನೆನಪಿನಿಂದಲೇ ವಿಕರ್ಮ ವಿನಾಶವಾಗುತ್ತದೆ. ಮತ್ತೆ ಅಂತ್ಯ ಮತಿ ಸೋ ಗತಿ ಆಗಿ ಬಿಡುವುದು. ಈಗ ಹಿಂತಿರುಗಿ ಹೋಗಬೇಕಾಗಿದೆ. ಎಲ್ಲರ ಸದ್ಗತಿದಾತ, ಎಲ್ಲರನ್ನು ಶ್ರೇಷ್ಠಾಚಾರಿಯನ್ನಾಗಿ ಮಾಡುವಂತಹವರು, ಶಾಂತಿ ದೇಶದಲ್ಲಿ ಕರೆದುಕೊಂಡು ಹೋಗುವವರು ಒಬ್ಬರೇ ತಂದೆ ಆಗಿದ್ದಾರೆ. ಜನ್ಮ-ಜನ್ಮಾಂತರವು ನಿಮಗೆ ತಂದೆ, ಟೀಚರ್, ಗುರು ಸಿಕ್ಕಿದರು ಆದರೆ ಅವರೆಲ್ಲರೂ ಶರೀರಧಾರಿಗಳು. ಯಾರೂ ಆತ್ಮಾಭಿಮಾನಿ ಆಗುವುದನ್ನು ಕಲಿಸುವುದಿಲ್ಲ. ಬೇಹದ್ದಿನ ತಂದೆಯೇ ಜ್ಞಾನಸಾಗರ ಆಗಿದ್ದಾರೆ. ಯಾರೆಲ್ಲಾ ಆತ್ಮರಿದ್ದಾರೆ ಅವರಲ್ಲಿ ಸಂಸ್ಕಾರವು ತುಂಬಿದೆ. ಮತ್ತೆ ಶರೀರ ಧಾರಣೆ ಮಾಡಿದಾಗ ಆ ಸಂಸ್ಕಾರವು ಇಮರ್ಜ್ ಆಗುತ್ತದೆ. ಈಗ ನಿಮಗೆ ಎಲ್ಲಾ ನಾಟಕದ ಜ್ಞಾನವಿದೆ ಮತ್ತೆಲ್ಲಾ ಮನುಷ್ಯರು ಘೋರ ಅಂಧಕಾರದಲ್ಲಿದ್ದಾರೆ. ಜ್ಞಾನಾಂಜನವನ್ನು ಸದ್ಗುರು ಕೊಟ್ಟರು ಎನ್ನುವ ಗಾಯನವು ಇದೆ ಎಂದಾಗ ಜ್ಞಾನಾಂಜನವನ್ನು ಕೊಡುವವರು ಜ್ಞಾನ ಸೂರ್ಯ ತಂದೆಯಾಗಿದ್ದಾರೆ. ಸತ್ಯಯುಗವನ್ನು ದಿನ, ಕಲಿಯುಗವನ್ನು ರಾತ್ರಿ ಎಂದು ಹೇಳಲಾಗುತ್ತದೆ. ಆತ್ಮಗಳು ಆ ನಿರಾಕಾರ ತಂದೆಯನ್ನು ನೆನಪು ಮಾಡುತ್ತಾರೆ. ತಂದೆ ತಿಳಿಸುತ್ತಾರೆ - ನಾನು ನಿಮ್ಮ ಮಕ್ಕಳಿಗೆ ಬ್ರಹ್ಮನ ಮುಖದ ಮೂಲಕ ಕಲ್ಪದ ಹಿಂದಿನಂತೆ ಎಲ್ಲಾ ಭಕ್ತಿಮಾರ್ಗದ ಶಾಸ್ತ್ರಗಳ ಸಾರವನ್ನು ತಿಳಿಸುತ್ತೇನೆ. ಇವೆಲ್ಲವು ಭಕ್ತಿಮಾರ್ಗದ ಸಾಮಾಗ್ರಿಯಾಗಿದೆ. ಯಾವುದು ಅರ್ಧಕಲ್ಪದಿಂದ ನಡೆಯುತ್ತಾ ಬಂದಿದೆ. ಮನುಷ್ಯರಂತು ಇದು ಪರಂಪರೆಯಿಂದ ನಡೆಯುತ್ತಾ ಬಂದಿದೆ ಎಂದು ಹೇಳುತ್ತಾರೆ. ರಾವಣನನ್ನೂ ಸಹ ಪರಂಪರೆಯಿಂದ ಸುಡುತ್ತಾ ಬಂದಿದ್ದಾರೆ. ಹಬ್ಬಗಳನ್ನು ಯಾರು ಆಚರಿಸುತ್ತಾರೆ, ಅವರು ಇದು ಪರಂಪರೆಯಿಂದ ನಡೆಯುತ್ತಾ ಬಂದಿದೆ ಎಂದು ಹೇಳುತ್ತಾರೆ ಆದರೆ ಪರಂಪರೆಯ ಅರ್ಥ ಏನಾಗಿದೆ? ಇದನ್ನು ತಿಳಿದುಕೊಂಡಿಲ್ಲ. ಸತ್ಯಯುಗದ ಆಯಸ್ಸು ಲಕ್ಷಾಂತರ ವರ್ಷಗಳೆಂದು ಬರೆದಿರುವ ಕಾರಣವೇ ಮನುಷ್ಯರು ಘೋರ ಅಂಧಕಾರದಲ್ಲಿದ್ದಾರೆ. ಭಕ್ತಿಯು ಯಾವಾಗಿನಿಂದ ಶುರುವಾಯಿತು, ಯಾವಾಗ ಪಾವನರಾದೆವು, ಏನೂ ತಿಳಿದುಕೊಂಡಿಲ್ಲ. ಭಗವಂತನು ಪತಿತರನ್ನು ಪಾವನ ಮಾಡಲು ಯಾವಾಗ ಈ ಭೂಮಿಗೆ ಬಂದರು? ಹೇಳುತ್ತಾರೆ ಕ್ರೈಸ್ತ್ಪೂರ್ವ 3000 ವರ್ಷದ ಹಿಂದೆ ಸ್ವರ್ಗವಿತ್ತು ಆದರೆ ಈಗ ಅನೇಕ ಮತಗಳು ಇದೆಯಲ್ಲವೇ. ಈಗ ಎಷ್ಟು ಮತಗಳು ಪ್ರಪಂಚದಲ್ಲಿ ಕೆಲಸ ಮಾಡುತ್ತಿವೆ. ಈಗ ತಂದೆಯು ಬಂದು ಶ್ರೇಷ್ಠ ಮತವನ್ನು ಕೊಡುತ್ತಾರೆ. ಮಕ್ಕಳೇ, ಶ್ರೀಮತದಿಂದ ನೀವು ಶ್ರೇಷ್ಠ ದೇವತೆಯಾಗುತ್ತೀರಿ. ರುದ್ರ ಮಾಲೆಯೂ ಇದೆ. ರುದ್ರ ಎಂದರೆ ನಿರಾಕಾರ ಭಗವಂತನೇ ಆಗಿದ್ದಾರೆ. ಅವರು ಶ್ರೀ, ಶ್ರೀ ಆಗಿದ್ದಾರೆ. ದೇವತೆಗಳಿಗೆ ಶ್ರೀ ಅರ್ಥಾತ್ ಶ್ರೇಷ್ಠ ಎಂದು ಹೇಳುತ್ತಾರೆ. ಈಗ ಶ್ರೀ ಶ್ರೀ ತಂದೆಯ ಮುಖಾಂತರ ಶ್ರೇಷ್ಠ ಪ್ರಪಂಚವಾಗುತ್ತದೆ ಎಂಬುದನ್ನು ಈಗ ನೀವು ಮಕ್ಕಳೇ ತಿಳಿದುಕೊಂಡಿದ್ದೀರಿ. ತಂದೆಯೂ ಶ್ರೀ ಶ್ರೀ ಎಂದರೆ ಶ್ರೇಷ್ಠರನ್ನಾಗಿ ಮಾಡುವವರಾಗಿದ್ದಾರೆ. ಈ ಎಲ್ಲಾ ಮಾತುಗಳನ್ನು ನೆನಪು ಮಾಡಬೇಕಾಗಿದೆ. ಕಲ್ಪದ ಮೊದಲಿನವರೇ ಇದನ್ನು ತಿಳಿದುಕೊಳ್ಳುತ್ತಾರೆ. ಈ ಜ್ಞಾನವು ಎಲ್ಲಾ ಧರ್ಮದವರಗೋಸ್ಕರ ಇದೆ. ತಂದೆಯು ಎಲ್ಲರಿಗೂ ಹೇಳುತ್ತಾರೆ - ಮಕ್ಕಳೇ ತಮ್ಮನ್ನು ಆತ್ಮ ಎಂದು ತಿಳಿಯಿರಿ. ಬೇಹದ್ದಿನ ತಂದೆಯಿಂದ ಎಷ್ಟು ಸುಖವು ಸಿಗುತ್ತಿದೆ. ಬೇಹದ್ದಿನ ತಂದೆಯು ಬಂದು ಇಷ್ಟೊಂದು ಮಕ್ಕಳನ್ನು ದತ್ತು ಮಾಡಿಕೊಳ್ಳುತ್ತಾರೆ. ಅಂದಾಗ ಇವರು ಮುಖವಂಶಾವಳಿಯಾದರಲ್ಲವೇ! ಎಷ್ಟೊಂದು ಜನ ಬ್ರಹ್ಮಾಕುಮಾರ-ಕುಮಾರಿಯರಿದ್ದಾರೆ, ಇವರು ನಂತರ ದೇವತೆಯಾಗುವವರಿದ್ದಾರೆ. ಇದು ಈಶ್ವರೀಯ ಕುಲವಾಗಿದೆ. ತಾತ (ದಾದಾ) ನಿರಾಕಾರ ಆಗಿದ್ದಾರೆ. ಅವರ ಮಗುವಿನ ಹೆಸರಾಗಿದೆ ಪ್ರಜಾಪಿತ ಬ್ರಹ್ಮಾ, ಇವರ ಮೂಲಕ ದತ್ತು ಮಾಡಿಕೊಳ್ಳುತ್ತಾರೆ. ನೀವು ಬ್ರಾಹ್ಮಣರು ಶಿವಬಾಬಾರವರ ಪರಿವಾರದವರಾಗಿದ್ದೀರಿ, ಇನ್ನು ವೃದ್ಧಿಯಾಗುತ್ತದೆ. ಈಗ ನಿಮ್ಮದು ನಂಬರ್ವನ್ ಸಮೂಹವಾಗಿದೆ. ಈಗ ನೀವು ಸೇವೆ ಮಾಡುತ್ತೀರಿ, ಎಲ್ಲರ ಕಲ್ಯಾಣ ಮಾಡುತ್ತೀರಿ. ನಿಮ್ಮ ಜಡ ನೆನಪಾರ್ಥ ಮಂದಿರವು ಸರಿಯಾಗಿ ಮಾಡಲ್ಪಟ್ಟಿದೆ. ಇಲ್ಲಿ ನೀವು ಚೈತನ್ಯದಲ್ಲಿ ಕುಳಿತಿದ್ದೀರಿ ಮತ್ತು ನಾವು ಪುನಃ ನಮ್ಮ ರಾಜ್ಯ ಸ್ಥಾಪನೆ ಮಾಡುತ್ತಿದ್ದೇವೆ ಎಂಬುದನ್ನು ತಿಳಿದುಕೊಂಡಿದ್ದೀರಿ. ಭಕ್ತಿಯಲ್ಲಿ ನಮ್ಮ ನೆನಪಾರ್ಥವಾಗಿ ನಮ್ಮ ಮಂದಿರಗಳು ಆಗುತ್ತವೆ. ಶಿವಬಾಬಾ ಇಲ್ಲದಿದ್ದರೆ ನೀವೆಲ್ಲಿ ಇರುತ್ತೀರಿ? ಬ್ರಹ್ಮಾ, ವಿಷ್ಣು, ಶಂಕರ ಎಲ್ಲಿದ್ದಾರೆ? ಈಗ ಶಿವಬಾಬಾ ರಚನೆಯನ್ನು ರಚಿಸುತ್ತಿದ್ದಾರಲ್ಲವೇ. ಪ್ರಜಾಪಿತ ಬ್ರಹ್ಮಾರ ಚಿತ್ರವೂ ಬೇರೆಯಾಗಿರಬೇಕು. ತ್ರಿಮೂರ್ತಿ ಬ್ರಹ್ಮಾ ಎಂದು ಹೇಳುತ್ತಾರೆ, ಆದರೆ ಅದಕ್ಕೆ ಯಾವ ಅರ್ಥವೂ ಇಲ್ಲ. ಪರಮಪಿತ ಪರಮಾತ್ಮ ಬ್ರಹ್ಮನ ಮುಖಾಂತರ ಸ್ಥಾಪನೆ ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೇವೆ. ಮಾಡಿ ಮಾಡಿಸುವವರು ಶಿವಬಾಬಾ ಆಗಿದ್ದಾರೆ. ಈ ಎಲ್ಲಾ ಮಾತುಗಳು ಧಾರಣೆ ಮಾಡುವುದಾಗಿದೆ. ಶಿವಬಾಬಾ ಸ್ವಯಂ ರಾಜಯೋಗವನ್ನು ಕಲಿಸುತ್ತಿದ್ದಾರೆ, ಜ್ಞಾನವನ್ನು ಕೊಡುತ್ತಿದ್ದಾರೆಂದರೆ ಅದನ್ನು ಧಾರಣೆ ಮಾಡಬೇಕು, ಇದರಲ್ಲಿ ಪವಿತ್ರತೆ ಮೊದಲನೆಯದಾಗಿದೆ. ಸಾಹಸವನ್ನೂ ತೋರಿಸಬೇಕು. ಗೃಹಸ್ಥದಲ್ಲಿರುತ್ತಾ ಪವಿತ್ರರಾಗಿ ತೋರಿಸಬೇಕಾಗಿದೆ. ಯಾವುದೇ ಕುಮಾರಿಯನ್ನು ರಕ್ಷಣೆ ಮಾಡುವುದಕ್ಕೋಸ್ಕರವೂ ಸ್ವಯಂವರ ಮಾಡುತ್ತಾರೆ, ಇದನ್ನು ಗಂಧರ್ವ ವಿವಾಹ ಎಂದು ಹೇಳುತ್ತಾರೆ. ಮತ್ತೆ ಅದರಲ್ಲಿಯೂ ಕೆಲವರು ನಾಪಾಸ್ ಆಗುತ್ತಾರೆ. ಕೆಲ-ಕೆಲವರು ಈ ರೀತಿಯು ಇರುತ್ತಾರೆ, ಮಧುವೆ ಮಾಡಿಕೊಂಡು ಮತ್ತೆ ಪವಿತ್ರವಾಗಿರುತ್ತಾರೆ. ಪವಿತ್ರರಾಗಿದ್ದು ಮತ್ತೆ ಜ್ಞಾನವನ್ನು ತೆಗೆದುಕೊಳ್ಳಬೇಕಾಗಿದೆ. ಧಾರಣೆಮಾಡಿ ಅನ್ಯರನ್ನು ತಮ್ಮ ಸಮಾನ ಮಾಡಿ ತೋರಿಸಬೇಕು, ಆಗಲೇ ಶ್ರೇಷ್ಠ ಪದವಿಯನ್ನು

ಪಡೆಯುವಿರಿ. ಈ ಜ್ಞಾನ ಯಜ್ಞದಲ್ಲಿ ವಿಘ್ನಗಳೂ ತುಂಬಾ ಬರುತ್ತವೆ. ಇವೆಲ್ಲವೂ ಆಗಲೇಬೇಕು. ನಾಟಕದಲ್ಲಿ ನೊಂದಾಯಿಸಲ್ಪಟ್ಟಿದೆ. ಕೆಲವು ಮಕ್ಕಳು ಹೇಳುತ್ತಾರೆ ಬಾಬಾ ನಮ್ಮ ಸಾಹುಕಾರತನವನ್ನು ಏನು ಮಾಡಬೇಕು, ಇದಕ್ಕಿಂತ ಪಾತ್ರೆಯನ್ನು ತೊಳೆದು, ರೊಟ್ಟಿಯನ್ನು ತಿನ್ನುವುದು ಒಳ್ಳೆಯದು ಏಕೆಂದರೆ ಪವಿತ್ರವಾಗಿ ಇರುತ್ತೇವೆ ಆದರೆ ತುಂಬಾ ಸಾಹಸಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಭೋಜನ ಮಾಡುವ ಸಮಯದಲ್ಲಿ ನೆನಪಿನಲ್ಲಿರಬೇಕಾಗಿದೆ. ವ್ಯರ್ಥ ವಾರ್ತಾಲಾಪ ಮಾಡಬಾರದಾಗಿದೆ. ನೆನಪಿನಿಂದ ಪಾಪಗಳ ಖಾತೆಯನ್ನು ಸಮಾಪ್ತಿ ಮಾಡಬೇಕಾಗಿದೆ.

2. ದಿನದಲ್ಲಿ ಶರೀರ ನಿರ್ವಹಣಾರ್ಥ ಕರ್ಮ ಮಾಡಿ ರಾತ್ರಿಯಲ್ಲಿ ಜಾಗೃತರಾಗಿದ್ದು ತಮ್ಮೊಂದಿಗೆ ತಾವೇ ಮಾತನಾಡಬೇಕಾಗಿದೆ. ಈ ರೀತಿ ವಿಚಾರ ಮಾಡಬೇಕು - ಈಗ ಈ ನಾಟಕ ಪೂರ್ಣವಾಯಿತು, ನಾವೀಗ ಹಿಂತಿರುಗಿ ಹೋಗುತ್ತೇವೆ. ಆದ್ದರಿಂದ ಜೀವಿಸಿದ್ದಂತೆಯೇ ಮಮತ್ವವನ್ನು ಕಳೆಯಬೇಕಾಗಿದೆ.

ವರದಾನ: ಡಬಲ್ ನಶೆಯ ಸ್ಥಿತಿಯ ಮೂಲಕ ಸದಾ ನಿರ್ವಿಘ್ನವಾಗುವ ಹಾಗೂ ಅನ್ಯರನ್ನೂ ಮಾಡುವಂತಹ ವಿಶ್ವ ಪರಿವರ್ತಕ ಭವ.

“ಮಾಲೀಕನಿಂದ ಬಾಲಕನಾಗಿದ್ದೇನೆ" - ಯಾವಾಗ ಬೇಕೋ ಆಗ ಮಾಲೀಕನ ಸ್ಥಿತಿಯಲ್ಲಿ ಸ್ಥಿತರಾಗಿ ಬಿಡಿ ಮತ್ತು ಯಾವಾಗ ಬೇಕೋ ಆಗ ಬಾಲಕನ ಸ್ಥಿತಿಯಲ್ಲಿ ಸ್ಥಿತರಾಗಿ ಬಿಡಿ - ಈ ಡಬಲ್ ನಶೆಯು ಸದಾ ನಿರ್ವಿಘ್ನರನ್ನಾಗಿ ಮಾಡುವಂತಹ ನಶೆಯಾಗಿದೆ. ಇಂತಹ ಆತ್ಮರ ಬಿರುದಾಗಿದೆ - ವಿಘ್ನ-ವಿನಾಶಕ. ಆದರೆ ಕೇವಲ ತಮಗಷ್ಟೇ ವಿಘ್ನ-ವಿನಾಶಕರಾಗುವುದಲ್ಲ, ಇಡೀ ವಿಶ್ವದ ವಿಘ್ನ-ವಿನಾಶಕರು, ವಿಶ್ವ-ಪರಿವರ್ತಕರಾಗಿದ್ದೀರಿ. ಯಾರು ಸ್ವಯಂ ಶಕ್ತಿಶಾಲಿಯಾಗಿರುತ್ತಾರೆಯೋ ಅವರ ಮುಂದೆ ವಿಘ್ನವು ಸ್ವತಹವಾಗಿಯೇ ಬಲಹೀನವಾಗಿ ಬಿಡುತ್ತದೆ.

ಸ್ಲೋಗನ್: ತಮ್ಮ ಡಬಲ್ ಲೈಟ್ ಸ್ವರೂಪದಲ್ಲಿ ಸ್ಥಿತರಾಗಿರುತ್ತೀರೆಂದರೆ ಎಲ್ಲಾ ಹೊರೆಗಳು ಸಮಾಪ್ತಿಯಾಗಿ ಬಿಡುತ್ತವೆ.